**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ.**

ಸಿ.ಸಿ.ನಂಃ **1449/2024**

ಫಿರ್ಯಾದಿಃ ಹೊಳೆ ಹೊನ್ನೂರು ಪೊಲೀಸ್ ಠಾಣೆ, ಭದ್ರಾವತಿ.

- ವಿರುದ್ಧ -

ಆರೋಪಿತರುಃ 1. ಬಸವರಾಜ್ ಬಿನ್ ಚೆನ್ನವಿರಪ್ಪ, 50 ವರ್ಷ,
ಲಿಂಗಾಯತ ಜನಾಂಗ, ವಾಸಃ ಅಗರದಹಳ್ಳಿ ಗ್ರಾಮ,
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2. ಸುಷ್ಮ ಕೊಂ ಬಸವರಾಜಪ್ಪ, 38 ವರ್ಷ,
ಲಿಂಗಾಯತ ಜನಾಂಗ, ವಾಸಃ ಅಗರದಹಳ್ಳಿ ಗ್ರಾಮ,
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

3. ಶ್ರೀಮತಿ ಉಷಾ ಕೊಂ ಶಿವಪ್ಪ, 61 ವರ್ಷ,
ಲಿಂಗಾಯತ ಜನಾಂಗ, ಮನೆಕೆಲಸ, ವಾಸಃ ಬಿಕೇನಹಳ್ಳಿ ಗ್ರಾಮ
ಚಿಕ್ಕಮಗಳೂರು ಜಿಲ್ಲೆ

4. ಶಿವಪ್ಪ ಬಿನ್ ಲೇಟ್ ಮಲ್ಲೇಶಪ್ಪ, 60 ವರ್ಷ,
ಲಿಂಗಾಯತ ಜನಾಂಗ, ವಾಸಃ ಬಿಕೇನಹಳ್ಳಿ ಗ್ರಾಮ
ಚಿಕ್ಕಮಗಳೂರು ಜಿಲ್ಲೆ.

**ದೋಷಾರೋಪಣೆ**

ನಾನು ರವಿ ಕುಮಾರ ವಿ. ಬಿ.ಎ.ಎಲ್., ಎಲ್.ಎಲ್.ಬಿ. ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂಡಾಧಿಕಾರಿಗಳಾದ ನಾನು, ಈ ಮೂಲಕ ಮೇಲೆ ಹೆಸರಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಸಾಕ್ಷಿ-1 ಪಾರ್ವತಮ್ಮ ನವರು 1 ನೇ ಆರೋಪಿಯಾದ ನಿಮ್ಮ ತಾಯಿ ಆಗಿದ್ದು, ಕಾನೂನು ಹೋರಾಟ ಮಾಡಿ ಅವರ ಹೆಸರಿನಲ್ಲಿರುವ ಆಸ್ತಿಯನ್ನು ಅವರು ಅನುಬೋಗಿಸುವ ಬಗ್ಗೆ ಯಾರು ತಕರಾರು ಮಾಡಬಾರದು ಎಂದು ಅವರ ಹೆಸರಿನಲ್ಲಿರುವ ಆಸ್ತಿ ಅವರ ಅನುಭೋಗದಲ್ಲಿದ್ದರೂ ಸಹ ದಿನಾಂಕಃ 18.12.2013

ರಂದು ಮಧ್ಯಾಹ್ನ 1.43 ರ ಸಮಯಕ್ಕೆ ಹೊಳೆಹೊನ್ನೂರು ಪೋಲಿಸ್ ಠಾಣಾ ವ್ಯಾಪ್ತಿಯ ಅಗರದಹಳ್ಳಿ ಗ್ರಾಮದಲ್ಲಿ ಸಾಕ್ಷಿ-1 ಪಾರ್ವತಮ್ಮ ನವರ ಹೆಸರಿನಲ್ಲಿರುವ ಮನೆಗೆ 1 ರಿಂದ 4 ರ ವರೆಗಿನ ಆರೋಪಿಗಳಾದ ನೀವು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಅವರ ಅನುಮತಿ ಪಡೆಯದೆ ಅಕ್ರಮ ಪ್ರವೇಶ ಮಾಡಿರುವುದರಿಂದ ಭಾರತೀಯ ದಂಡ ಸಂಹಿತೆ ಕಲಂ. 448 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಹಾಗೂ ನೀವೆಲ್ಲರೂ ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ 10.09.2024

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.